www.ecourtsindia.com



(ಇಂದು ದಿಃ 24-08-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು)

**ಪಾಟಿ ಸವಾಲು ಃ- 1 ಮತ್ತು 5 ನೇ ಪ್ರತಿವಾದಿಗಳ ಪರ ವಕೀಲರಿಂದ ಃ-**

ನಾನು 1948 ರಲ್ಲಿ ಹುಟ್ಟಿದ್ದು ದಿನಾಂಕ ಹಾಗೂ ತಿಂಗಳು ನಿಖರವಾಗಿ ಗೊತ್ತಿಲ್ಲ. ನಾನು ಆರ್ ಎಂ ಪಿ ಡಾಕ್ಟರ್ ಆಗಿರುತ್ತೇನೆ. ನಾನು ಮಾಲುರು ತಾಲ್ಲೂಕ್ ಚಿಕ್ಕ ತಿರುಪತಿಯಲ್ಲಿ ಹೆಂಡತಿ ಮಕ್ಕಳೊಂದಿಗೆ ಸುಮಾರು 40 ವರ್ಷಗಳಿಂದ ವಾಸವಿರುತ್ತೇನೆ. ಆ ಪೂರ್ವದಲ್ಲಿ ನಾವು ಗುಡ್ಡ ಹಟ್ಟಿಯಲ್ಲಿ ವಾಸವಿದ್ದೆವು. ಚಿಕ್ಕ ತಿರುಪತಿಯಲ್ಲಿ ನಾವು ನಮ್ಮ ಸ್ವಂತ ಮನೆಯಲ್ಲಿ ವಾಸವಿರುತ್ತೇವೆ. ಈಗ ಸುಮಾರು 10-12 ವರ್ಷಗಳ ಹಿಂದೆ ಆ ಮನೆ ಕಟ್ಟಿಸಿರುತ್ತೇವೆ . ಆ ಪೂರ್ವದಲ್ಲಿ ಚಿಕ್ಕ ತಿರುಪತಿಯಲ್ಲಿ ನಾವು ಬಾಡಿಗೆ ಮನೆಯಲ್ಲಿ ವಾಸವಿದ್ದೆವು. 1 ನೇ ಪ್ರತಿವಾದಿ ನಮ್ಮ ದೊಡ್ಡ ಅಣ್ಣ ಇರುತ್ತಾರೆ. 1 ನೇ ಪ್ರತಿವಾದಿಗೆ ಈಗ ಸುಮಾರು 70 ವರ್ಷ ವಯಸ್ಸು ಆಗಿರಬಹುದು. 1 ನೇ ಪ್ರತಿವಾದಿ ತನ್ನ ಹೆಂಡತಿ ಮಕ್ಕಳೊಂದಿಗೆ ಗುಡ್ಡಹಟ್ಟಿಯಲ್ಲಿ ವಾಸವಿರುತ್ತಾರೆ. 2 ನೇ ಪ್ರತಿವಾದಿ ಕಮಲಮ್ಮನಿಗೆ ಈಗ ಸುಮಾರು 60 ವರ್ಷ ವಯಸ್ಸು ಆಗಿರಬಹುದು. 2 ನೇ ಪ್ರತಿವಾದಿಗೆ ಸುಮಾರು 20 ವರ್ಷ ವಯಸ್ಸು ಆದಾಗ ಅವಳ ಮದುವೆ ಆಗಿರುತ್ತದೆ. 2 ನೇ ಪ್ರತಿವಾದಿ ತನ್ನ ಮದುವೆ ಆದ ನಂತರ ತನ್ನ ಗಂಡ ಮಕ್ಕಳೊಂದಿಗೆ ಸೋಲಕುಂಟೆಯಲ್ಲಿ ವಾಸವಿರುತ್ತಾಳೆ. 3 ನೇ ಪ್ರತಿವಾದಿ ಲಕ್ಷ್ಮಮ್ಮ ಮರಣ ಹೊಂದುವ ಕಾಲದಲ್ಲಿ ಅವಳಿಗೆ ಸುಮಾರು 58 ವರ್ಷ ವಯಸ್ಸು ಆಗಿತ್ತು . 3 ನೇ ಪ್ರತಿವಾದಿ ತನ್ನ ಗಂಡ ಹಾಗೂ ಮಕ್ಕಳೊಂದಿಗೆ ಮದುವೆ ಆದ ನಂತರ ಕಲ್ಲಹಳ್ಳಿ ಯಲ್ಲಿ ವಾಸವಾಗಿದ್ದರು. 4 ನೇ ಪ್ರತಿವಾದಿ ರಾಜಣ್ಣ ರೆಡ್ಡಿಗೆ ಈಗ ಸುಮಾರು 58-60 ವರ್ಷ ವಯಸ್ಸು ಆಗಿರಬಹುದು. 4 ನೇ ಪ್ರತಿವಾದಿ ರಾಜಣ್ಣ ರೆಡ್ಡಿ ತನ್ನ ಹೆಂಡತಿ ಮಕ್ಕಳೊಂದಿಗೆ ಗುಡ್ಡಹಟ್ಟಿಯಲ್ಲಿ ವಾಸವಿದ್ದು ನಂತರ ಕಲ್ಲಹಳ್ಳಿಗೆ ಹೋಗಿ ವಾಸವಿದ್ದು ಈಗ ಅವರು ಅತ್ತಿಬೆಲೆಯಲ್ಲಿ ಪ್ರತ್ಯೇಕ ಮನೆ ಮಾಡಿಕೊಂಡು

This is a True Copy of the Court Records Online. Authenticated @ districts.ecourtsindia.com/cnr/KABR210006052007/truecopy/order-1.pdf

www.ecourtsindia.com



ವಾಸವಿರುತ್ತಾರೆ. 4 ನೇ ಪ್ರತಿವಾದಿ ರಾಜಣ್ಣ ರೆಡ್ಡಿ ತನ್ನ ಹೆಂಡತಿ ಮಕ್ಕಳೊಂದಿಗೆ ಈಗ ಸುಮಾರು 25-30 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿರುತ್ತಾರೆ. ಇಲ್ಲಿ ನಾನು 6 ಆಸ್ತಿಗಳಿಗೆ ಕೇಸು ಹಾಕಿರುತ್ತೇನೆ ಆದರೆ ಪ್ರತ್ಯೇಕವಾಗಿ ಅವುಗಳ ವಿವರಣೆ ಕೊಡಲು ನನಗೆ ಆಗುವುದಿಲ್ಲ. ದಾವಾ ಆಸ್ತಿಗಳನ್ನು ಬಿಟ್ಟರೆ ಮತ್ತೆ ಬೇರೆ ಯಾವುದಾದರು ಆಸ್ತಿಗಳು ನಮ್ಮ ಕುಟುಂಬಕ್ಕೆ ಇರುತ್ತವೆಯೋ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗಳ ವಿಸ್ತೀರ್ಣ ಎಷ್ಟು ಇರುತ್ತವೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ನನ್ನ ಹೆಸರಿನಲ್ಲಿ ಯಾವುದೇ ಆಸ್ತಿಗಳ ಕಂದಾಯ ದಾಖಲೆಗಳು ಇರುವುದಿಲ್ಲ. ದಿನಾಂಕ 23.09.1984 ರಲ್ಲಿ ನಮ್ಮ ತಂದೆ, ನಾನು, 1 ನೇ ಪ್ರತಿವಾದಿ ಹಾಗೂ 4 ನೇ ಪ್ರತಿವಾದಿಗಳ ಜುಬಾನಿ ಪಾಲು ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆ 1984 - 85 ರಲ್ಲಿ ಮೃತ ಪಟ್ಟಿರಬಹುದು ಆದರೆ ಆ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ. ದಿನಾಂಕ 23.09.1984 ರ ಜುಬಾನಿ ಪಾಲು ವಿಭಾಗದಲ್ಲಿ ಸರ್ವೆ ನಂ. 65/1 ರಲ್ಲಿ 3 ಎಕರೆ 10 ಗುಂಟೆ ನನ್ನ ಹೆಸರಿಗೆ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಮ್ಮ ತಂದೆ ತೀರಿಕೊಂಡ ನಂತರ ಸರ್ವೆ ನಂ 65/1 ರಲ್ಲಿನ 3 ಎಕರೆ 10 ಗುಂಟೆ ಜಮೀನನ್ನು ನಾವು 5 ಜನ ಅಣ್ಣ ತಮ್ಮಂದಿರು ಅಕ್ಕ ತಂಗಿಯರು ಸೇರಿ ಅದನ್ನು ಮಾರಾಟ ಮಾಡಿ ಹಣ ಹಂಚಿಕೊಂಡಿರುತ್ತೇವೆ ಎಂದು ಸಾಕ್ಷಿಯು ಹೇಳುತ್ತಾರೆ. ನಾವು ಮಾರಾಟ ಮಾಡಿದ ಸರ್ವೆ ನಂ 65/1 ರ 3 ಎಕರೆ 10 ಗುಂಟೆ ಜಮೀನಿನ ಪೂರ್ವಕ್ಕೆ ಮಳ್ಳಯ್ಯನವರ ವೆಂಕಟರೆಡ್ಡಿಯವರ ಜಮೀನು, ಪಶ್ಚಿಮಕ್ಕೆ ಒನಕನಹಳ್ಳಿ ಮುನಿಷಾಮಿ ಹಾಗೂ ಮೋಟಪ್ಪನ ಹೊಲ, ಉತ್ತರಕ್ಕೆ ಭೀಮಯ್ಯ  ಜಮೀನು ಹಾಗೂ ದಕ್ಷಿಣಕ್ಕೆ ಗೋಪಾಲರೆಡ್ಡಿ ಯ ಹಿಸ್ಸೆ ಜಮೀನು ಅಂದರೆ ದಿನ್ನೆ ಹೊಲ ಇರುತ್ತದೆ ಎಂದರೆ ಸಾಕ್ಷಿಯು ನಾನು ಬಹಳ ದಿನಗಳ ಹಿಂದೆಯೇ ಚಿಕ್ಕ ತಿರುಪತಿಗೆ ಹೋಗಿದ್ದು ಆ ಬಗ್ಗೆ ನಿಖರವಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ.

This is a True Copy of the Court Records Online. Authenticated @ districts.ecourtsindia.com/cnr/KABR210006052007/truecopy/order-1.pdf

ಸರ್ವೆ ನಂ 65/1 ನಮ್ಮ ಪಿತ್ರಾಜಿತ ಸ್ವತ್ತು ಆಗಿರುತ್ತದೆ. ನಮ್ಮ ವಾದ ಪತ್ರದಲ್ಲಿ ಸರ್ವೆ ನಂ 65/1 ಅನ್ನು ಮಾರಾಟ ಮಾಡಿದ ಬಗ್ಗೆ ಹೇಳಿರುತ್ತೇವೆ. ಸದರಿ ಸರ್ವೆ ನಂಬರ್ ನಲ್ಲಿ ಇಲ್ಲಿ ಹಿಸ್ಸೆ ಕೇಳಿಲ್ಲ. 2 ರಿಂದ 4 ನೇ ಪ್ರತಿವಾದಿಗಳು ಸಹ ಈ ದಾವೆಯಲ್ಲಿ ತಮಗೂ ಹಿಸ್ಸೆ ಬೇಕೆಂದು ಕೇಳಿರುತ್ತಾರೆ. ದಿನಾಂಕ 29.03.1989 ರಲ್ಲಿ ನನ್ನ ಹಿಸ್ಸೆಗೆ ಬಂದ ಸರ್ವೆ ನಂ 65/1 ರಲ್ಲಿನ 3 ಎಕರೆ 10 ಗುಂಟೆ ಜಮೀನನ್ನು ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 23.09.1984 ರ ಜುಬಾನಿ ಹಿಸ್ಸೆಯಲ್ಲಿ ನನ್ನ ಪಾಲಿಗೆ ಬಂದ ಆ ಜಮೀನನ್ನು ನಾನು 29.03.1989 ರಲ್ಲಿ ನಾರಾಯಣ್ಣಪ್ಪ ಎನ್ನುವವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹಿಸ್ಸೆಗೆ ಬಂದ ಜಮೀನನ್ನು ಮಾರಾಟ ಮಾಡಿದ ನಂತರ ಖಾತೆ ಕ್ರಯ ಪಡೆದುಕೊಂಡವರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಹಿಸ್ಸೆಗೆ ಬಂದ ಸದರಿ ಜಮೀನನ್ನು ಜುಬಾನಿ ಪಾಲು ವಿಭಾಗದಲ್ಲಿ ಬಿ ಷಡ್ಯೂಲ್ ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ. ನಾರಾಯಣಪ್ಪನ ಹೆಸರಿಗೆ ಕಂದಾಯ ದಾಖಲೆ ಆದ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂ 16/4 ರ 2 ಎಕರೆ 1 ಗುಂಟೆ ನಮ್ಮ ಒಟ್ಟು ಕುಟುಂಬದ ಆಸ್ತಿ ಇರುತ್ತದೆ . ಸದರಿ ಸರ್ವೆ ನಂ 16/4 ರ 2 ಎಕರೆ 1 ಗುಂಟೆ ಜಮೀನನ್ನು ಜುಬಾನಿ ಪಾಲು ವಿಭಾಗದಲ್ಲಿ 4 ನೇ ಪ್ರತಿವಾದಿ ರಾಜಣ್ಣ ರೆಡ್ಡಿ ಹೆಸರಿಗೆ ಸಿ ಷೆಡ್ಯೂಲ್ ಎಂದು ಕೊಡಲಾಗಿದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ರಾಜಣ್ಣ ರೆಡ್ಡಿ ಹಾಗೂ ಆತನ ಹೆಂಡತಿ ದಿನಾಂಕ 27.07.2000 ದಲ್ಲಿ ಆ ಆಸ್ತಿಯನ್ನು ಪುಷ್ಪಾವತಿ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ 16/4 ರ ಬಗ್ಗೆ ವಾದ ಪತ್ರದಲ್ಲಿ ತೋರಿಸಿಲ್ಲ ಹಾಗೂ ಅದರಲ್ಲಿ ಹಿಸ್ಸೆ ಕೇಳಿಲ್ಲ. ದಿನಾಂಕ 23.09.1984 ರ ಜುಬಾನಿ ಪಾಲು ವಿಭಾಗದಲ್ಲಿ 1 ನೇ ಪ್ರತಿವಾದಿಯ ಹಿಸ್ಸೆಯನ್ನು ಎ ಷೆಡ್ಯೂಲ್ ಎಂದು ತೋರಿಸಲಾಗಿದೆ ಎಂದರೆ ಸಾಕ್ಷಿಯು ಅವರೇ ಅದನ್ನು



ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಹಿಸ್ಸೆಗೆ ಮತ್ತು 4 ನೇ ಪ್ರತಿವಾದಿ ಹಿಸ್ಸೆಗೆ ಬಂದ ಜಮೀನುಗಳನ್ನು ಮಾರಾಟ ಮಾಡಿ ಈಗ ಮತ್ತೆ ವಿಭಾಗ ಆಗಬೇಕು ಎಂದು ಸುಳ್ಳು ಕೇಸು ಹಾಕಿರುತ್ತೇವೆ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABR210006052007/truecopy/order-1.pdf

**(ವಿನಂತಿ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎ ನು.,

ಪ್ರಧನಾ ಹಿ.ಸಿ.ಜೆ., ಆನೇಕಲ್.

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KABR210006052007/truecopy/order-1.pdf